# ಆಹಾ ಸುದ್ದಿ!

★ ಸಸಿತೋಟ



ಶೇ 49ರಷ್ಟು ಮಹಿಳೆಯರು ಎತ್ತರವಿರುವ ಪುರುಷರನ್ನು ಇಷ್ಟಪಡುತ್ತಾರಂತೆ. ಆದರೆ ಪ್ರಪಂಚದ ಮೂರನೇ ಅತಿ ಎತ್ತರದ ಮನುಷ್ಯ ಬ್ರೆಜಿಲ್‌ನ ಈ ಜೋಎಲಿಸನ್ (ಎತ್ತರ- 7 ಅಡಿ 8 ಇಂಚು) ಮಾತ್ರ ತನ್ನನ್ನು ಇಷ್ಟಪಡುವ ಹುಡುಗಿಗಾಗಿ ಆನ್‌ಲೈನ್‌ನಲ್ಲಿ ಜಾಹೀರಾತು ಕೊಡಬೇಕಾಯ್ತಂತೆ. ಕೊನೆಗೂ ಸಿಕ್ಕ ಹುಡುಗಿಯ ಎತ್ತರ 5 ಅಡಿ. ಅಡ್ಡಿಯಿಲ್ಲ, ಆಕೆ ಮನೆಯಲ್ಲಿ ಏಣಿಗಾಗಿ ಖರ್ಚು ಮಾಡಬೇಕಾದ ಅವಶ್ಯಕತೆಯಿಲ್ಲ.

ಯೂರೋಪಿನ ಹಲವು ದೇಶಗಳಲ್ಲಿ ದುಬಾರಿ ವಾಚ್, ಒಡವೆ, ಕಾರು ಕದಿಯುತ್ತಿದ್ದ ತಂಡವನ್ನು ಇಂಟರ್‌ಪೋಲ್ ಬಂಧಿಸಿದ್ದು ಅವರು ನೀಡಿದ ವಿವರಗಳಿಂದ ಪೊಲೀಸರು ಮೂರ್ಛೆ ಹೋಗುವುದೊಂದು ಬಾಕಿಯಂತೆ. ಈ 50 ಮಂದಿಯ ತಂಡ ದರೋಡೆಯಲ್ಲಿ ತರಬೇತಿ ಪಡೆದಿದ್ದು 'ರೊಮಾನಿಯ ಅಕಾಡೆಮಿ ಆಫ್ ಕ್ರಿಮಿನಲ್ಸ್'ನಲ್ಲಂತೆ. ಇನ್ನೆಷ್ಟು ಬ್ಯಾಚುಗಳು ಹೊರಬಿದ್ದಿವೆಯೋ, ಪರೀಕ್ಷೆಯಲ್ಲಿ ಚಿನ್ನದ ಪದಕ ಪಡೆದವರು ಯಾರೋ.. ತನಿಖಾ ವರದಿಗೆ ಕಾಯಬೇಕಷ್ಟೆ.

ಬ್ರಿಟನ್ ರಾಜಕುವರ ವಿಲಿಯಮ್ಸ್‌ನ ಪತ್ನಿ ಕ್ಯಾಥರಿನ್ ಎರಡನೇ ಮಗುವಿಗೆ ಜನ್ಮ ನೀಡಲಿದ್ದು, ಬುಕ್ಕಿಗಳು ಬಂಪರ್ ದುಡ್ಡು ಮಾಡುತ್ತಿದ್ದಾರೆ. ಮಗು ಹೆಣ್ಣೋ ಅಥವಾ ಗಂಡೋ, ಹೆಸರೇನಿಡುತ್ತಾರೆ.. ಎಂಬಿತ್ಯಾದಿ ಊಹೆಗಳ ಮೇಲೆ ಹಣ ಹೂಡುವವರು ಲಕ್ಷಾಂತರ ಮಂದಿಯಂತೆ. ಕ್ರಿಕೆಟ್ ಬೆಟ್ಟಿಂಗ್ ಅನ್ನೂ ಕದ್ದುಮುಚ್ಚಿ ಮಾಡುವವರು ಕೈ ಹಿಸುಕುತ್ತಿರಬಹುದು.



ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಧರೆಯ ಮಣ್ಣು ಜರಿದಾಗ ಯಾರಿಗೋ ದೇವರ ಮುಖದಂತೆ ಕಾಣಿಸಿತು. ಜನ ಜಾತ್ರೆಗೆ ಹೋಗುವಂತೆ ತೆರಳಿ ದೇವರ ಮುಖ ನೋಡಿ ಧನ್ಯರಾದರಂತೆ. ಆ ಜಾಗದ ಮಾಲೀಕ ಟಿಕೆಟ್ ಇಟ್ಟು ಸಬ್‌ಕಾ ಮಾಲೀಕ್.. ಎಂದು ಹಣ ಎಣಿಸುತ್ತಿದ್ದಾನಂತೆ.

ಅಮೆರಿಕದ ಅಲಾಸ್ಕಾದಲ್ಲಿ ವಿಲ್ಸನ್ ಮತ್ತು ಕ್ರಾಸ್ ವಿಚ್ಛೇದನ ಪಡೆದುಕೊಂಡಾಗ ಮಕ್ಕಳನ್ನು ಯಾರು ನೋಡಿಕೊಳ್ಳಬೇಕು ಎಂಬುದೇನೋ ನಿರ್ಧಾರವಾಯ್ತಂತೆ. ಆದರೆ ಸಾಕಿದ ಈ ಮೂರು ಬೆಕ್ಕುಗಳನ್ನು ಹೇಗೆ ಹಂಚಿಕೊಳ್ಳಬೇಕು ಎಂಬುದರ ಕುರಿತು ಜಗಳವಾಗಿ ಈಗ ಜಗಳ ಕೋರ್ಟ್ ಕಟಕಟೆ ಏರಿದೆಯಂತೆ. ಅಲ್ಲಿಯವರೆಗೆ ಬೆಕ್ಕುಗಳು ಕಂಡವರ ಮನೆಯ ಹಾಲು ಕುಡಿಯುತ್ತ ಮಿಯಾಂವ್ ಎನ್ನಬೇಕು. ನಮ್ಮಲ್ಲಿ ವಿಚ್ಛೇದನವಾದರೆ ಇಷ್ಟೆಲ್ಲ ಖರ್ಚೇ ಇಲ್ಲ ಬಿಡಿ. ಬೆಕ್ಕು, ನಾಯಿಗಳು ಗಂಡ-ಹೆಂಡತಿಗಿಂತ ಮೊದಲೇ ಮನೆ ಖಾಲಿ ಮಾಡುತ್ತವೆ.





ಬ್ರಿಟನ್ನಿನ ಅತ್ಯಂತ ಹಿರಿಯ ವರ ಜಾರ್ಜ್ ಕಿರ್ಬಿಗೆ 103 ವರ್ಷ ವಯಸ್ಸು. 91ರ ಚೆಲುವೆ ಡೋರಿನ್ ಮುಂದೆ ಮದುವೆ ಪ್ರಸ್ತಾವ ಇಟ್ಟಾಗ ಕೈಯಲ್ಲಿ ಗುಲಾಬಿ ಹೂವು ಹಿಡಿದು ಮೊಳಕಾಲೂರಿ ಕುಳಿತುಕೊಂಡಿಲ್ಲ ಎಂದು ಶೇಕಡಾ ನೂರರಷ್ಟು ಆತ್ಮವಿಶ್ವಾಸದಿಂದ ಹೇಳಬಹುದು. ಏಕೆಂದರೆ ಕೆಳಗೆ ಕೂತರೆ ಮತ್ತೆ ಮೇಲೇಳಲು ಈ ತಾತನಿಗೆ ಸಾಧ್ಯವಾಗಲಿಕ್ಕಿಲ್ಲ.